# ಕಿರಿಯ ಕಾನೂನು ಅಧಿಕಾರಿ -2008

## ಸಾಮಾನ್ಯ ಅಧ್ಯಯನ

**ಸಮಯ: ಒಂದು ಗಂಟೆ ಮೂವತ್ತು ನಿಮಿಷಗಳು** **ಅಂಕಗಳು:100**

1. ಸೌರವ್ಯೂಹದಲ್ಲಿ ಭೂಮಿಯ ಕಕ್ಷೆಯ ಆಕಾರವು.
   ಎ) ವೃತ್ತಾಕಾರ ಬಿ)ಅಂಡಾಕಾರ (ದೀರ್ಘವೃತ್ತ)
   ಸಿ) ಗೋಲಾಕಾರ ಡಿ)ಪರವಲಯಾಕಾರ
2. ಈ ಕೆಳಗಿನವುಗಳಲ್ಲಿ ಯಾವುದು ನಮ್ಮ ಸೌರವ್ಯೂಹಕ್ಕೆ ಸೇರಿದ ಗ್ರಹವಲ್ಲ?
   ಎ) ಭೂಮಿ ಬಿ) ಮಂಗಳ ಸಿ) ಚಂದ್ರ ಡಿ)ಶನಿ
3. ಸೂರ್ಯನ ಗ್ರಹಣವೆಂದರೆ ವಾಸ್ತವವಾಗಿ.
   ಎ) ಭೂಮಿಯ ನೆರಳು ಸೂರ್ಯನ ಮೇಲೆ ಬೀಳುವುದು
   ಬಿ) ಚಂದ್ರನ ನೆರಳು ಸೂರ್ಯನ ಮೇಲೆ ಬೀಳುವುದು
   ಸಿ) ಚಂದ್ರನು ನಮ್ಮ ಸೂರ್ಯಾವಲೋಕನಕ್ಕೆ ಅಡ್ಡ ಬರುವುದು
   ಡಿ) ರಾಹು ಅಥವಾ ಕೇತು ಸೂರ್ಯನನ್ನು ಭಾಗಶಃ ಅಥವಾ ಪೂರ್ತಿಯಾಗಿ ಆವರಿಸುವುದು
4. ಕೆಳಗಿನ ಯಾವ ನದಿಯು ಕರ್ನಾಟಕ ರಾಜ್ಯದಲ್ಲಿಯೇ ಪೂರ್ತಿಯಾಗಿ ಹರಿಯುತ್ತದೆ?
   ಎ) ಕಾವೇರಿ ನದಿ ಬಿ) ತುಂಗಭದ್ರಾ ನದಿ
   ಸಿ) ಕೃಷ್ಣಾನದಿ ಡಿ) ನೇತ್ರಾವತಿ ನದಿ
5. ಒಂದೇ ವಸ್ತುವಿನಿಂದ ಮಾಡಲ್ಪಟ್ಟ A ಮತ್ತು B ಎಂಬ ಎರಡು ವಸ್ತುಗಳನ್ನು ಎತ್ತರದ ಒಂದು ಕಟ್ಟಡದ ತುದಿಯಿಂದ ಏಕಕಾಲದಲ್ಲಿ ಕೆಳಕ್ಕೆ ಬಿಡಲಾಗುತ್ತದೆ. A ಎಂಬ ವಸ್ತುವಿನ ಭಾರವು 0.5 ಕಿಲೋ ಗ್ರಾಮ ಮತ್ತು B ಎಂಬ ವಸ್ತುವಿನ ತೂಕವು 2 ಕಿಲೋ ಗ್ರಾಮ್. A ಮತ್ತು B ಗಳು ಅನುಕ್ರಮವಾಗಿ ಭೂಮಿಯನ್ನು ತಲುಪಲು ತೆಗೆದುಕೊಳ್ಳುವ ಸಮಯವು ಸೆಕೆಂಡ್‌ಗಳಲ್ಲಿ $t_1$ ಮತ್ತು $t_2$ ಎಂದಿದ್ದಲ್ಲಿ.
   ಎ) $t_1=t_2$ ಬಿ) $t_1=4t_2$ ಸಿ) $t_2=4t_1$
   ಡಿ) $t_1$ ಮತ್ತು $t_2$ ಗಳ ನಡುವಿನ ಸಂಬಂಧವು ಆ ಕಟ್ಟಡ ಎತ್ತರವನ್ನು ಅವಲಂಬಿಸಿರುತ್ತದೆ.
6. ಮನುಷ್ಯನ ಶರೀರದ ಮಾಮೂಲು ತಾಪ ಮತ್ತು ನಾಡಿ ಮಿಡಿತಗಳು ಅನುಕ್ರಮವಾಗಿ................ ಆಗಿರುತ್ತವೆ.
   ಎ) $98.4^0$C ಮತ್ತು ನಿಮಿಷಕ್ಕೆ 72
   ಬಿ) $98.4^0$ F ಮತ್ತು ನಿಮಿಷಕ್ಕೆ 92
   ಸಿ) $100^0$ F ಮತ್ತು ನಿಮಿಷಕ್ಕೆ 120
   ಡಿ) $98.4^0$F ಮತ್ತು ನಿಮಿಷಕ್ಕೆ 72
7. 2007ರ ಡಿಸೆಂಬರ್‌ನಲ್ಲಿ ವಿಶ್ವಸಂಸ್ಥೆಯ ಹವಾಮಾನ ಪರಿವರ್ತನೆಯ ಬಗೆಗಿನ ಅಧಿವೇಶನ ಜರುಗಿದ ಸ್ಥಳವು.
   ಎ) ಸಿಡ್ನಿ, ಆಸ್ಟ್ರೇಲಿಯಾ ಬಿ) ರಿಯೋ, ಬ್ರೆಝಿಲ್
   ಸಿ) ಬಾಲಿ, ಇಂಡೋನೇಶಿಯ ಡಿ) ಬಾಲಿ, ಥೈಲ್ಯಾಂಡ್
8. ಯುಎಸ್‌ಎ ಯೊಂದಿಗೆ ಮಾಡಿಕೊಳ್ಳುವ ಪರಮಾಣು ಒಡಂಬಡಿಕೆಯ ಪ್ರಸ್ತಾಪವನ್ನು ......ಎಂದು ಕರೆಯುತ್ತಾರೆ.
   ಎ) 123 ಒಪ್ಪಂದ ಬಿ) 321 ಒಪ್ಪಂದ
   ಸಿ) ಗ್ಯಾಟ್ ಡಿ) ಕ್ಯೋಟೋ ಪ್ರೊಟೋಕಾಲ್
9. 2008ರ ಜೂನ್ 27ರಂದು ನಿಧನ ಹೊಂದಿದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾರನ್ನು ಪ್ರೀತಿ, ಗೌರವಗಳಿಂದ......... ಎಂಬ ಅಡ್ಡ ಹೆಸರಿನಿಂದಲೂ ಕರೆಯುತ್ತಾರೆ.
   ಎ) ಬಾಬ್ ಬಿ) ಸ್ಯಾಮ್ ಸಿ) ಟೈಗರ್ ಡಿ) ಅಂಕಲ್
10. ಬೆಂಗಳೂರು ನಗರದ ಈಗಿನ ಜನಸಂಖ್ಯೆಯು ಸುಮಾರು.
    ಎ) 40ಲಕ್ಷ ಬಿ) 60 ಲಕ್ಷ ಸಿ) 80 ಲಕ್ಷ ಡಿ)100 ಲಕ್ಷ
11. ಈಗ ಭಾರತದಲ್ಲಿ ಪ್ರಗತಿಯಲ್ಲಿರುವ ಪಂಚವಾರ್ಷಿಕ ಯೋಜನೆಯು ಮತ್ತು ಅದರ ಕಾಲಾವಧಿಯು ಅನುಕ್ರಮವಾಗಿ.
    ಎ) 10ನೇ ಯೋಜನೆ, 2005-10
    ಬಿ) 10ನೇ ಯೋಜನೆ, 2007-12
    ಸಿ) 11ನೇ ಯೋಜನೆ, 2005-10
    ಡಿ) 11ನೇ ಯೋಜನೆ, 2007-12

12. ಫುಟ್‌ಬಾಲ್ ಟ್ರೋಫಿ ಯುರೋ 2008ನ್ನು ಗೆದ್ದುಕೊಂಡ ದೇಶವು.

ಎ) ಜರ್ಮನಿ ಬಿ) ಇಟಲಿ ಸಿ) ರಷ್ಯ ಡಿ) ಸ್ಪೆಯಿನ್

13. ಮುಂಬರುವ ಯುಎಸ್ ಅಧ್ಯಕ್ಷ ಪದವಿಗೆ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯು

ಎ) ಜಾರ್ಜ್‌ಡಬ್ಲ್ಯೂ. ಬುಷ್ ಬಿ) ಬರಾಕ್ ಒಬಾಮ

ಸಿ) ಹಿಲರಿ ಕ್ಲಿಂಟನ್ ಡಿ) ಜಾನ್ ಮಕ್‌ಕೆಯಿನ್

14. ಕರ್ನಾಟಕಕ್ಕೆ ಹೈಕೋರ್ಟಿನ ಸಂಚಾರಿ ಪೀಠವನ್ನು ಇತ್ತೀಚೆಗೆ ಉದ್ಘಾಟಿಸಿರುವುದು.

ಎ) ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ

ಬಿ) ಹುಬ್ಬಳ್ಳಿ ಮತ್ತು ಗುಲ್ಬರ್ಗದಲ್ಲಿ

ಸಿ) ಬೆಳಗಾಂ ಮತ್ತು ಹುಬ್ಬಳ್ಳಿಯಲ್ಲಿ

ಡಿ) ಧಾರವಾಡ ಮತ್ತು ಗುಲ್ಬರ್ಗದಲ್ಲಿ

15. ಇತ್ತೀಚೆಗೆ ಕರ್ನಾಟಕದ ಕೆಲವು ಭಾಗಗಳಲ್ಲಿ ಕಾಣಿಸಿಕೊಂಡಿರುವ ಎರಡು ಮಾನವ ವೈರಸ್ ಜ್ವರಗಳೆಂದರೆ.

ಎ) ಚಿಕೂನ್ ಗುನ್ಯ: ಡೆಂಗ್ಯೂ

ಬಿ) ಚಿಕೂನ್ ಗುನ್ಯ: ಕಾಲರ

ಸಿ) ಏಷಿಯನ್ ಫ್ಲೂ (ಹಕ್ಕಿಜ್ವರ): ಡೆಂಗ್ಯೂ

ಡಿ) ಏವಿಯನ್ ಫ್ಲೂ: ಚಿಕೂನ್ ಗುನ್ಯ

16. 2008ರ ವಿಂಬಲ್ಡನ್ ಮಹಿಳೆಯರ ಟೆನ್ನಿಸ್ ಕಪ್ ಅಂತಿಮ ಪಂದ್ಯವು ಸೆರೀನಾ ಮತ್ತು ವೀನಸ್ ವಿಲ್ಲಿಯಮ್ಸ್ ಎಂಬ ಇಬ್ಬರು ಸಹೋದರಿಯರ ನಡುವೆ ನಡೆಯಿತು. ಅದರಲ್ಲಿ ಗೆದ್ದಾಕೆ.

ಎ) ಅಕ್ಕ ಸೆರೀನಾ ಬಿ) ಅಕ್ಕ ವೀನಸ್

ಸಿ) ತಂಗಿ ಸೆರೀನಾ ಡಿ) ತಂಗಿ ವೀನಸ್

**17. 1 ಮತ್ತು 2ನೇ ಪಟ್ಟಿಗಳಲ್ಲಿ ಕೊಟ್ಟಿರುವವುಗಳನ್ನು ಸರಿಯಾಗಿ ಜೊತೆಗೊಳಿಸಿರಿ.**

| | **ಪಟ್ಟಿ-1 (ಕೊರತೆ)** | **ಪಟ್ಟಿ-2 (ರೋಗಗಳು)** |
|---|---|---|
| ಎ) | ಇನ್‌ಸುಲಿನ್ | 1) ಬಂಜೆತನ |
| ಬಿ) | ಅಯೊಡಿನ್ | 2) ಇರುಳು ಕುರುಡು |
| ಸಿ) | ವಿಟಮಿನ್ ಎ | 3) ಮಧುಮೇಹ |
| ಡಿ) | ವಿಟಮಿನ್ ಇ | 4) ಗಳಗಂಡ |

**ಉತ್ತರ ಸಂಕೇತಗಳು:**

| | ಎ | ಬಿ | ಸಿ | ಡಿ |
|---|---|---|---|---|
| ಎ) | 3 | 1 | 4 | 2 |
| ಬಿ) | 4 | 3 | 2 | 1 |
| ಸಿ) | 3 | 4 | 1 | 2 |
| ಡಿ) | 3 | 4 | 2 | 1 |

18. 1 ಮತ್ತು 2ನೇ ಪಟ್ಟಿಗಳಲ್ಲಿ ಕೊಟ್ಟಿರುವ ನಮೂದುಗಳನ್ನು ಸರಿಯಾಗಿ ಜೊತೆಗೊಳಿಸಿರಿ.

| | **ಪಟ್ಟಿ-1 (ದೇಶ)** | **ಪಟ್ಟಿ-2 (ರಾಜಧಾನಿ)** |
|---|---|---|
| ಎ) | ಅರ್ಜೆಂಟೀನ | 1) ಬ್ರುಸೆಲ್ಸ್ |
| ಬಿ) | ಬೆಲ್ಜಿಯಮ್ | 2) ಹವಾನಾ |
| ಸಿ) | ಕ್ಯೂಬಾ | 3) ಕೋಪನ್ ಹೆಗನ್ |
| ಡಿ) | ಡೆನ್ಮಾರ್ಕ್ | 4) ಬ್ಯೂನೆಸ್ ಐರಿಸ್ |

**ಉತ್ತರ ಸಂಕೇತಗಳು:**

| | ಎ | ಬಿ | ಸಿ | ಡಿ |
|---|---|---|---|---|
| ಎ) | 4 | 1 | 2 | 3 |
| ಬಿ) | 4 | 2 | 1 | 3 |
| ಸಿ) | 2 | 4 | 1 | 3 |
| ಡಿ) | 4 | 2 | 3 | 1 |

19. 1 ಮತ್ತು 2ನೇ ಪಟ್ಟಿಗಳಲ್ಲಿ ಕೊಟ್ಟಿರುವ ನಮೂದುಗಳನ್ನು ಸರಿಯಾಗಿ ಜೊತೆಗೊಳಿಸಿರಿ.

| | **ಪಟ್ಟಿ-1 (ಇಸವಿ)** | **ಪಟ್ಟಿ-2 (ಭಾರದಲ್ಲಿ ನಡೆದ ಘಟನೆ)** |
|---|---|---|
| ಎ) | 1956 | 1) ಹೊಸ ಆರ್ಥಿಕ ನೀತಿ |
| ಬಿ) | 1983 | 2) ವಿಶ್ವ ಕ್ರಿಕೆಟ್ ಕಪ್ ವಿಜಯ |
| ಸಿ) | 1991 | 3) ಅತ್ಯಂತ ಇತ್ತೀಚಿನ ಜನಗಣತಿ |
| ಡಿ) | 2001 | 4) ಪ್ರಾಂತ್ಯಗಳ ಪುನರ್ ಸಂಘಟನೆ |

**ಉತ್ತರ ಸಂಕೇತಗಳು:**

| | ಎ | ಬಿ | ಸಿ | ಡಿ |
|---|---|---|---|---|
| ಎ) | 1 | 3 | 2 | 4 |
| ಬಿ) | 4 | 2 | 1 | 3 |
| ಸಿ) | 2 | 4 | 1 | 3 |
| ಡಿ) | 4 | 2 | 3 | 1 |

20. 1ಮತ್ತು 2ನೇ ಪಟ್ಟಿಗಳಲ್ಲಿ ಕೊಟ್ಟಿರುವ ನಮೂದುಗಳನ್ನು ಸರಿಹೊಂದಿಸಿರಿ.

| ಪಟ್ಟಿ-1 (ಕನ್ನಡ ಗ್ರಂಥಕರ್ತರು) | ಪಟ್ಟಿ-2 (ಕಾವ್ಯನಾಮ) |
|---|---|
| ಎ) ಮಾಸ್ತಿವೆಂಕಟೇಶ ಅಯ್ಯಂಗಾರ್ | 1)ಚದುರಂಗ |
| ಬಿ) ವಿ.ಕೃ.ಗೋಕಾಕ್ | 2)ಶ್ರೀನಿವಾಸ |
| ಸಿ) ಸುಬ್ರಹ್ಮಣ್ಯ ರಾಜೇ ಅರಸ್ | 3)ಅಂಬಿಕಾತನಯದತ್ತ |
| ಡಿ) ದ.ರಾ.ಬೇಂದ್ರೆ | 4)ವಿನಾಯಕ |

**ಉತ್ತರ ಸಂಕೇತಗಳು:**

| | ಎ | ಬಿ | ಸಿ | ಡಿ |
|---|---|---|---|---|
| ಎ) | 2 | 4 | 3 | 1 |
| ಬಿ) | 2 | 4 | 1 | 3 |
| ಸಿ) | 4 | 2 | 1 | 3 |
| ಡಿ) | 4 | 2 | 3 | 1 |

21. 1ಮತ್ತು 2ನೇ ಪಟ್ಟಿಗಳಲ್ಲಿ ಕೊಟ್ಟಿರುವ ನಮೂದುಗಳನ್ನು ಜೊತೆಗೊಳಿಸಿರಿ.

| ಪಟ್ಟಿ-1 (ಕ್ರೀಡಾಪಟು) | ಪಟ್ಟಿ-2 (ಕ್ರೀಡೆ) |
|---|---|
| ಎ) ರಾಫೇಲ್ ನಡಾಲ್ | 1) ಕ್ರಿಕೆಟ್ |
| ಬಿ) ವಿಶ್ವನಾಥನ್ ಆನಂದ್ | 2) ಬಿಲಿಯರ್ಡ್ಸ್ |
| ಸಿ) ಕುಮಾರ ಸಂಗಕ್ಕರ | 3) ಚೆಸ್ |
| ಡಿ) ಜೀವ್ ಮಿಲ್ಕಾಸಿಂಗ್ | 4) ಗಾಲ್ಫ್ |
| | 5) ಟೆನ್ನಿಸ್ |

**ಉತ್ತರ ಸಂಕೇತಗಳು:**

| | ಎ | ಬಿ | ಸಿ | ಡಿ |
|---|---|---|---|---|
| ಎ) | 5 | 3 | 4 | 1 |
| ಬಿ) | 4 | 3 | 1 | 2 |
| ಸಿ) | 5 | 3 | 1 | 2 |
| ಡಿ) | 5 | 3 | 1 | 4 |

22. 1ಮತ್ತು 2ನೇ ಪಟ್ಟಿಗಳಲ್ಲಿ ಕೊಟ್ಟಿರುವ ನಮೂದುಗಳನ್ನು ಜೊತೆಗೊಳಿಸಿರಿ.

| ಪಟ್ಟಿ-1 (ಬೂಕರ್ ಬಹುಮಾನವನ್ನು ಗಳಿಸಿದ ಕೃತಿ) | ಪಟ್ಟಿ-2 (ಗ್ರಂಥಕರ್ತೃ) |
|---|---|
| ಎ) ಥಿಂಗ್ಸ್ ಫಾಲ್ ಅಪಾರ್ಟ್ | 1)ಕಿರಣ್ ದೇಸಾಯಿ |
| ಬಿ) ದಿ ಇನ್ ಹೆರಿಟೆನ್ಸ್ ಆಫ್ ಲಾಸ್ | 2)ಅರುಂಧತಿ ರಾಯ್ |
| ಸಿ) ದ ಗಾಡ್ ಆಫ್ ಸ್ಮಾಲ್ ಥಿಂಗ್ಸ್ | 3)ಆ್ಯನ್ ರೈಟ್ |
| ಡಿ) ದ ಗ್ಯಾದರಿಂಗ್ | 4)ಚಿನುವಾ ಅಚಿಬೆ |

**ಉತ್ತರ ಸಂಕೇತಗಳು:**

| | ಎ | ಬಿ | ಸಿ | ಡಿ |
|---|---|---|---|---|
| ಎ) | 4 | 1 | 2 | 3 |
| ಬಿ) | 1 | 4 | 2 | 3 |
| ಸಿ) | 4 | 1 | 3 | 2 |
| ಡಿ) | 2 | 1 | 3 | 4 |

23. 1ಮತ್ತು 2ನೇ ಪಟ್ಟಿಗಳಲ್ಲಿ ಕೊಟ್ಟಿರುವ ನಮೂದುಗಳನ್ನು ಜೊತೆಗೊಳಿಸಿರಿ.

| ಪಟ್ಟಿ-1 (ಪದವಿ/ಪುರಸ್ಕಾರ) | ಪಟ್ಟಿ-2 (ವ್ಯಕ್ತಿ) |
|---|---|
| ಎ) ರಾಷ್ಟ್ರೀಯ ಬಸವ ಪುರಸ್ಕಾರ 2006 | 1)ನೆಲ್ಸನ್ ಮಂಡೇಲ |
| ಬಿ) ಭಾರತದಲ್ಲಿ ಹಸಿರು ಕ್ರಾಂತಿಯ ಜನಕ | 2)ಡಾ.ಎ.ಪಿ.ಜೆ.ಕಲಾಮ್ |
| ಸಿ) ನೊಬೆಲ್ ಪ್ರಶಸ್ತಿ ವಿಜೇತ | 3)ಕೆ.ಜಿ.ಬಾಲಕೃಷ್ಣನ್ |
| ಡಿ) ಭಾರತದ ಚೀಫ್‌ಜಸ್ಟಿಸ್ | 4)ನಾರ್ಮನ್ ಡಿ ಬೋರ್ಲಾಗ್ |

**ಉತ್ತರ ಸಂಕೇತಗಳು:**

| | ಎ | ಬಿ | ಸಿ | ಡಿ |
|---|---|---|---|---|
| ಎ) | 1 | 2 | 4 | 3 |
| ಬಿ) | 4 | 2 | 1 | 3 |
| ಸಿ) | 2 | 4 | 3 | 1 |
| ಡಿ) | 2 | 4 | 1 | 3 |

24. 1ಮತ್ತು 2ನೇ ಪಟ್ಟಿಗಳಲ್ಲಿ ಕೊಟ್ಟಿರುವ ನಮೂದುಗಳನ್ನು ಜೊತೆಗೊಳಿಸಿರಿ.

| ಪಟ್ಟಿ-1 (ಅಣೆಕಟ್ಟು) | ಪಟ್ಟಿ-2 (ನದಿ) |
|---|---|
| ಎ) ಕೃಷ್ಣರಾಜ ಸಾಗರ | 1)ಶಿಂಶಾ |
| ಬಿ) ಮಾರ್ಕೊನಹಳ್ಳಿ | 2)ಘಟಪ್ರಭಾ |
| ಸಿ) ಹಿದಕಲ ಜಲಾಶಯ | 3)ಕಾವೇರಿ |
| ಡಿ) ಆಲಮಟ್ಟಿ | 4)ಕೃಷ್ಣಾ |

**ಉತ್ತರ ಸಂಕೇತಗಳು:**

| | ಎ | ಬಿ | ಸಿ | ಡಿ |
|---|---|---|---|---|
| ಎ) | 4 | 1 | 3 | 2 |
| ಬಿ) | 3 | 1 | 4 | 2 |
| ಸಿ) | 1 | 3 | 2 | 4 |
| ಡಿ) | 3 | 1 | 2 | 4 |

25. 36 ವರ್ಷ ವಯಸ್ಸಿನ ಬಾಬ್ಬಿ ಜಿಂದಾಲ್ ರವರು 2007ರಅಕ್ಟೋಬರ್‌ನಲ್ಲಿ ಅಮೆರಿಕದ ಒಂದು ರಾಜ್ಯದ ಗವರ್ನರ್ (ರಾಜ್ಯಪಾಲ) ಪದವಿ ಅಲಂಕರಿಸುವ ಮೂಲಕ ಅಮೇರಿಕದ ರಾಜ್ಯದ ಗವರ್ನರ್ ಆದ ಮೊಟ್ಟ ಮೊದಲ ಭಾರತೀಯ ಮೂಲದ ವ್ಯಕ್ತಿ ಎಂಬ ಕೀರ್ತಿಗೆ ಭಾಜನರಾದುದಲ್ಲದೆ ಇತಿಹಾಸವನ್ನೇ ಸೃಷ್ಟಿಸಿದರು. ಅವರಿದ್ದ ಪಕ್ಷ ಮತ್ತು ಗವರ್ನರ್‌ಆದ ರಾಜ್ಯಗಳು ಅನುಕ್ರಮವಾಗಿ

ಎ) ಡೆಮಕ್ರ್ಯಾಟಿಕ್, ಲೂಸಿಯಾನ

ಬಿ) ಡೆಮಕ್ರ್ಯಾಟಿಕ್, ಜಾರ್ಜಿಯ

ಸಿ) ರಿಪಬ್ಲಿಕನ್, ಲೂಸಿಯಾನ

ಡಿ) ರಿಪಬ್ಲಿಕನ್, ಜಾರ್ಜಿಯ

26. ಅಲಹಾಬಾದ್ ನಗರದ ಸಮೀಪ ಮೂರು ನದಿಗಳ ಸಂಗಮ (ತ್ರಿವೇಣಿ ಸಂಗಮ) ಸ್ಥಳವಿದೆ. ಆ ಮೂರರಲ್ಲಿ ಎರಡು ನದಿಗಳು ಗಂಗಾ ಮತ್ತು ಯಮುನಾ. ಮೂರನೆಯ ನದಿಯು ಗುಪ್ತವಾಗಿದೆ. ಗುಪ್ತವಾಗಿರುವ ಆ ನದಿಯ ಹೆಸರು ಹಾಗೂ ಆ ಸ್ಥಳದ ಇನ್ನೊಂದು ಹೆಸರು ಅನುಕ್ರಮವಾಗಿ.

ಎ) ಸರಯೂ ಮತ್ತು ಪ್ರಯಾಗ

ಬಿ) ಸರಯೂ ಮತ್ತು ಗಯಾ

ಸಿ) ಸರಸ್ವತಿ ಮತ್ತು ಗಯಾ

ಡಿ) ಸರಸ್ವತಿ ಮತ್ತು ಪ್ರಯಾಗ

27. 'ರಾಜೀವ್ ಗಾಂಧಿ ಖೇಲ್ ರತ್ನ, ಪ್ರಶಸ್ತಿಯು ಕ್ರೀಡಾರಂಗದಲ್ಲಿ ಅತ್ಯುನ್ನತ ಸಾಧನೆ ಮಾಡುವವರಿಗೆ ನೀಡುವ ಭಾರತದ ಅತ್ಯುನ್ನತ ಕ್ರೀಡಾ ಪ್ರಶಸ್ತಿಯೆಂದು ಪರಿಗಣಿಸಲ್ಪಟ್ಟಿದೆ. ಕೆಳಗೆ ಕೊಟ್ಟಿರುವವರಲ್ಲಿ ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ ವಿಜೇತರನ್ನು ಕಂಡು ಹಿಡಿಯಿರಿ.

ಎ: ರಾಜ್ಯವರ್ಧನ ಸಿಂಗ್ (ಶೂಟಿಂಗ್)

ಬಿ: ಧನರಾಜ್ ಪಿಳ್ಳೈ (ಹಾಕಿ)

ಸಿ: ಕುಂಜುರಾಣಿ ದೇವಿ (ಭಾರ ಎತ್ತುವುದು)

ಎ) ಎ ಮಾತ್ರ　　ಬಿ) ಎ ಮತ್ತು ಬಿ ಮಾತ್ರ

ಸಿ) ಬಿ ಮಾತ್ರ　　ಡಿ) ಈ ಮೇಲಣ ಮೂರು ಮಂದಿಗೂ

28. 1992ರಲ್ಲಿ ಆರಂಭಿಸಲ್ಪಟ್ಟ ಕರ್ನಾಟಕ ರತ್ನ ಪ್ರಶಸ್ತಿಯನ್ನು ಕರ್ನಾಟಕದಲ್ಲಿ ತಾವು ಆರಿಸಿಕೊಂಡ ಕ್ಷೇತ್ರದಲ್ಲಿ ಮಹೋನ್ನತ ಸಾಧನೆ ಮಾಡಿದವರಿಗೆ ನೀಡಲಾಗುತ್ತದೆ. ಇದನ್ನು ರಾಜ್ಯ ಮಟ್ಟದ ಭಾರತ ರತ್ನ ಪ್ರಶಸ್ತಿಯ ಪ್ರತಿರೂಪ ಎನ್ನಲಾಗುತ್ತದೆ.ಕೆಳಗೆ ಹೆಸರಿಸಿರುವ ವ್ಯಕ್ತಿಗಳಲ್ಲಿ ಕರ್ನಾಟಕ ರತ್ನ ಪ್ರಶಸ್ತಿಯನ್ನು ಗೆದ್ದು ಕೊಂಡವರನ್ನು ಕಂಡು ಹಿಡಿಯಿರಿ.

ಎ: ಡಾ.ರಾಜ್‌ಕುಮಾರ್

ಬಿ: ಡಾ.ಶಿವಕುಮಾರ ಸ್ವಾಮೀಜಿ

ಸಿ: ಶ್ರೀ ರಾಹುಲ್‌ದ್ರಾವಿಡ್

ಎ) ಎ ಮಾತ್ರ

ಬಿ) ಮತ್ತು ಬಿ ಮಾತ್ರ

ಸಿ) ಎ ಮತ್ತು ಸಿ ಮಾತ್ರ

ಡಿ) ಮೇಲೆ ಹೆಸರಿಸಿರುವ ಮೂರು ಮಂದಿ ಕೂಡ

29. ಕೆಳಗೆ ಹೆಸರಿಸಿರುವ ಕನ್ನಡ ಸಾಹಿತ್ಯರಂಗದ ದಿಗ್ಗಜರುಗಳಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದವರನ್ನು ಕಂಡುಹಿಡಿಯಿರಿ.

ಎ) ದ.ರಾ.ಬೇಂದ್ರೆ　　ಬಿ) ಶಿವರಾಮಕಾರಂತ

ಸಿ) ಗಿರೀಶ್ ಕರ್ನಾಡ್

ಎ) ಎ ಮಾತ್ರ　　ಬಿ) ಎ ಮತ್ತು ಬಿ ಮಾತ್ರ

ಸಿ) ಬಿ ಮತ್ತು ಸಿ ಮಾತ್ರ　　ಡಿ) ಮೇಲಿನ ಮೂರು ವ್ಯಕ್ತಿಗಳು

30. ಭಾರತದ ರಿಜರ್ವ್ ಬ್ಯಾಂಕ್‌ಗಾಗಿ ರೂಪಾಯಿ ನೋಟುಗಳನ್ನು ಮುದ್ರಿಸುವ ಸೌಕರ್ಯ ಹೊಂದಿರುವ ಕರ್ನಾಟಕದ ನಗರವು.

ಎ) ಬೆಂಗಳೂರು　　ಬಿ) ಮೈಸೂರು

ಸಿ) ಬೆಳಗಾಂ　　ಡಿ) ಹುಬ್ಬಳ್ಳಿ

31. ಕೆಳಗೆ ಕೊಟ್ಟಿರುವ ಸಂಕ್ಷಿಪ್ತ ಮತ್ತು ವಿಸ್ತೃತ ರೂಪಗಳಲ್ಲಿ ಯಾವುದು ಸರಿ ಎಂಬುದನ್ನು ಕಂಡುಹಿಡಿಯಿರಿ.

ಎ: PIN–ಪೋಸ್ಟಲ್ ಇಂಡೆಕ್ಸ್ ನಂಬರ್

ಬಿ: PAN–ಪರ್ಮನೆಂಟ್ ಅಕೌಂಟ್ ನಂಬರ್

ಸಿ: ATM– ಎನಿ ಟೈಮ್ ಮನಿ

ಎ) ಎ ಮಾತ್ರ　　ಬಿ) ಎ ಮತ್ತು ಬಿ ಮಾತ್ರ

ಸಿ) ಸಿ ಮಾತ್ರ　　ಡಿ) ಎಲ್ಲ ಮೂರು ಸರಿ